**ವರುಷದೊಳಗೇ ಜೋತಯ್ಯ ಹೃದಯಾಘಾತವಾಗಿ ಕಣ್ಮುಚ್ಚಿದ. ನಾವೆಲ್ಲಾ ಕೈಲಾದಷ್ಟು ಸೇರಿಸಿಕೊಟ್ಟ ಪುಟ್ಟಗಂಟಿನ ಜೊತೆಗೆ ಜೋತಯ್ಯನ ಹೆಂಡತಿ ಮಾದೇವಿ ಮಗುವನ್ನು ಕರೆದುಕೊಂಡು ತನ್ನ ತವರಿಗೆ ಹೋಗಿಬಿಟ್ಟಿದ್ದಳು. ಅವರೊಂದಿಗೇ ಆ ಬಿದಿರಿನ ಬುಟ್ಟಿಯೂ ಸಾಗಿಬಿಟ್ಟಿತ್ತು.**

ಸ್ಪಷ್ಟವಾಗಿ ನೆನಪಾಗಿರಲೇ ಇಲ್ಲಾ ನೋಡಿ! ಆದರೆ ಇತ್ತೀಚೆಗೇಕೋ ಮತ್ತೆ ಕಾಡುತ್ತಿದ್ದಾನೆ. ಮರೆವೆಯೇ ನನ್ನ ಪರಮ ಶತ್ರುವಾಗಿ ನಾನೊಂದು ಜೀವಂತ ಹೆಣವಾಗಿಬಿಡುವ ಭೀತಿ ಕಾಡುತ್ತಿರುವ ಸಮಯದಲ್ಲಿ, ನೆನಪಿನ ಉಳಿವಿಗಾಗಿ ಹೆಣಗಾಡುತ್ತಿರುವ ಈ ನೀರವ ರಾತ್ರಿಯಲ್ಲಿ ಅದು ಹೇಗೋ ಆತ ಮತ್ತು ಅವನೊಂದಿಗೆ ಬೆಸೆದಿದ್ದ ನೆನಪುಗಳು ಕೊಂಡಿ ಕಳಚಿಕೊಂಡು ಪುಳಪುಳನೆ ಹೊರಬೀಳುತ್ತಿವೆ! ನನಗೆ ಇನ್ನೂ ನೆನಪುಗಳು ಜಾಗೃತಾವಸ್ಥೆಯಲ್ಲಿವೆ ಎಂಬುದರ ಸಾಕ್ಷಿಯಾಗಿ ತಂಪು ನೀಡುತ್ತಿವೆ.

★★★

ಅಂದು ಜೋತಪ್ಪ ರಜೆಗಾಗಿ ಒತ್ತಾಯಿಸಿದ್ದಾಗ, ಅರೆಮನಸ್ಸಿನಲ್ಲಿದ್ದ ಅಪ್ಪಯ್ಯನನ್ನು ಒಪ್ಪಿಸಿ ಜೋತಪ್ಪನನ್ನು ಮನೆಗೆ ಕಳುಹಿಸಿದ್ದೆ. ಮರುದಿವಸ ಮುರುಗಲು ಗುಡ್ಡದ ತುದಿಯಲ್ಲಿದ್ದ ನನ್ನ ಅಚ್ಚುಮೆಚ್ಚಿನ ವ್ಯೂ ಪಾಯಿಂಟೊಂದನ್ನು ಮಗಳು ಶಾರ್ವರಿಗೆ ತೋರಿಸುವ ಸಲುವಾಗಿ ಹೊರಟೆ. ವಾರಿಜೆಗೋ ಅತ್ತೆ ಕಟ್ಟಿಕೊಡುತ್ತಿದ್ದ ಪೊಟ್ಟಣವನ್ನು ತುಂಬಿಸಿಕೊಳ್ಳುವ, ಮರುದಿವಸದ ಪ್ರಯಾಣದ ತಯಾರಿಯ ಗಡಿಬಿಡಿ. ಹೀಗಾಗಿ ನಾವಿಬ್ಬರೇ ಕೊಡೆ ಹಿಡಿದು ಹೊರಟಿದ್ದೆವು. ಆಗಸ ತುಂಬೆಲ್ಲಾ ಕರಿಮೋಡ ಸಾಲುಗಟ್ಟುವುದ ಕಂಡು ಮನಸು ನವಿಲಾಗಿತ್ತು. ಗುಡ್ಡವನ್ನು ಹತ್ತುವ ಆರಂಭದಲ್ಲಿ ಬಹಳ ಉತ್ಸಾಹದಿಂದ ಪಟಾಕಿ ಕೊಚ್ಚುತ್ತಿದ್ದ ಪೋರಿ, ಆಮೇಲೆ ಸುಸ್ತಾಗಿ ನೂರು ವಿಧದ ನಖರಾ ಮಾಡಿ ಹಲವು ಬಾರಿ ಹೆಗಲೇರಿ, ಕೆಲವೊಂದು ಬಾರಿ ನನ್ನ ಪುಸಲಾಯಿಸುವಿಕೆಗೆ ಅಂತೂ ನಾಲ್ಕು ಹೆಜ್ಜೆಹಾಕಿ ಹಾಗೂ ಹೀಗೂ ನಾವು ವ್ಯೂ ಪಾಯಿಂಟ್ ತಲುಪಿದ್ದಾಗಿತ್ತು. ಆದರೆ ನಾಲ್ಕು ವರುಷದ ಪುಟ್ಟ ಕೂಸಿಗೆ ಅಲ್ಲಿಗೆ ಹೋದಮೇಲೆ ಮಾತ್ರ ಬಹಳ ಖುಶಿಯಾಗಿಬಿಟ್ಟಿತ್ತು.

ಎತ್ತ ನೋಡಿದರತ್ತ ಹಬ್ಬಿದ್ದ ಹಸಿರು ಮಲೆ, ಬೆಟ್ಟದ ಬುಡದಲ್ಲಿ ಕಾಣುತ್ತಿದ್ದ ಬೆಣ್ಣೆಹೊಳೆ, ಮೋಡಗಟ್ಟಿದ ಆಗಸದಿಂದ ಆಗೀಗ ಹನಿಯುವ ನೀರು, ಬರ್‍ರನೆ ಬೀಸುವ ಗಾಳಿಯು ಬಿಡಿಸಿದ್ದ ಅವಳ ಪುಟ್ಟ ಕೊಡೆಯನ್ನೂ ಅತ್ತಿತ್ತ ಬಗ್ಗಿಸಿ ಮುಖವನ್ನು ಒದ್ದೆಯಾಗಿಸಿ ಅವಳಲ್ಲಿ ನಗೆಮಳೆಯನ್ನು ಸುರಿಸುತ್ತಿದ್ದ ಆ ರಸಘಳಿಗೆಯೊಳಗೆ ನಾನು ಮುಳುಗಿದ್ದಾಗಲೇ ದೂರದಿಂದ ಸಣಕಲು ದೇಹದ ಮನುಷ್ಯಾಕೃತಿಯೊಂದು ಬೆಟ್ಟ ಹತ್ತಿ ಇತ್ತಲೇ ಸಾವಕಾಶವಾಗಿ ಬರುತ್ತಿರುವುದು ಕಂಡಿತ್ತು. ಆಕಾರ ಸಮೀಪಿಸುತ್ತಿದ್ದಂತೇ ಸರಿಯಾಗಿ ನೋಡಿದರೆ ಅವನು ಜೋತಯ್ಯನಾಗಿದ್ದ!

ಮಾಸಲು ಅಂಗಿ, ದೊಗಲೆ ಪ್ಯಾಂಟು ಧರಿಸಿ ಬುಸಬುಸನೆ ಏದುಸಿರುಬಿಡುತ್ತಾ ಸಮೀಪಿಸುತ್ತಿದ್ದಾಗ ಕಂಡಿತ್ತು ಅವನ ತಲೆಯ ಹಿಂಭಾಗದಿಂದ ಇಣುಕುತ್ತಿದ್ದ ಅವನ ಮಗ ಶೇಖರನ ಮುದ್ದು ಮುಖ! ನೋಡಿದರೆ, ಜೋಗಪ್ಪ ತನ್ನ ಬೆನ್ನಿಗೊಂದು ದೊಡ್ಡ ಬಿದಿರು ಬುಟ್ಟಿಯನ್ನು ಜೋತಾಡಿಸಿಕೊಂಡು ಅದರ ದಾರವನ್ನು ಎದೆಗೆ ಕಟ್ಟಿಕೊಂಡು, ಆ ಬುಟ್ಟಿಯೊಳಗೆ ಮಗನನ್ನು ಕೂರಿಸಿಕೊಂಡು ನಾವಿದ್ದ ಕಡೆಗೇ ಮೆಲ್ಲನೆ ನಡೆದು ಬರುತ್ತಿದ್ದ.

“ಏನೋ ಇದು ಜೋತಯ್ಯಾ? ಯಾವ್ದೋ ಅರ್ಜೆಂಟು ಕೆಲ್ಸ ಇದೆ ರಜೆ ಕೊಡಿ ಅಂತ ಅಪ್ಪಯ್ಯನ ಹತ್ರ ಕೇಳಿದ್ಯಲ್ಲೋ. ಈಗ ನೋಡಿದ್ರೆ ಇಲ್ಲಿಗೆ ಹೀಗೆ ಬಂದಿದ್ದೀಯಲ್ಲೋ! ಹೌದು, ನಿನ್ ಮುಖ ಯೆಂತಕ್ಕೆ ಒಳ್ಳೆ ಸುಟ್ ಬದ್ನೆಕಾಯಾಂಗೆ ಆಗದೆ? ಇದೆಂಥಾ ನಮ್ನಿ ವೇಶನಪ್ಪಾ ನಿಂದು?” ಎಂದು ನಗುತ್ತಾ